**ಓ ಎಸ್ ನಂಃ 220-15**
**ಪಿ ಡಬ್ಲ್ಯೂ ಃ 1**

**ದಿಃ 03-09-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ**

ನಾನು ಈ ಮೊದಲು ಹಾಜರುಪಡಿಸಿದ ದಾಖಲೆಗಳನ್ನೇ ಪುನಃ ಹಾಜರು ಪಡಿಸಿರುತ್ತೇನೆ ಅಂದರೆ ಹೆಚ್ಚುವರಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದು ಹೇಳುತ್ತಾರೆ. ಈಗ 1973 ರಿಂದ ಆದ ಆರ್ ಟಿ ಸಿ ಗಳು ಮತ್ತು ಮ್ಯುಟೇಷನ್ ರಿಜಸಿಸ್ಟರ್ ಗಳನ್ನು ಹಾಜರುಪಡಿಸಿರುತ್ತೇನೆ. ಈ ಮೊದಲು ನಾನು ಸಾಕ್ಷಿ ಮಾಡಿಸಿದಾಗ ಈಗ ಹಾಜರುಪಡಿಸಿದ ದಾಖಲೆಗಳು ಸಿಕ್ಕಿರಿಲಿಲ್ಲ ಆದಕಾರಣ ಹಾಜರುಪಡಿಸಿಲ್ಲ. ಈ ಮೊದಲು ಈಗ ಹಾಜರುಪಡಿಸಿದ ದಾಖಲೆಗಳನ್ನು ಪಡೆದು ಸಂಬಂಧಪಟ್ಟ ಕಾರ್ಯಾಲಯದಲ್ಲಿ ಅರ್ಜಿಯನ್ನು ಕೊಟ್ಟಿರುವುದಿಲ್ಲ. ಈ ದಾವೆಯನ್ನು ವಿಳಂಬ ಮಾಡುವುದಕ್ಕಾಗಿ ನಾನು ದಾಖಲೆಗಳನ್ನು ಈಗ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ, ಈ ಮೊದಲು ನನ್ನ ಮುಖ್ಯ ವಿಚಾರಣೆ ಸಮಯದಲ್ಲಿ ಈಗ ಹಾಜರುಪಡಿಸಿದ ದಾಖಲೆಗಳು ಸಿಗುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಮೊದಲೇ ಸಲ್ಲಿಸಿದ ದಾಖಲೆಗಳನ್ನು ಪುನಃ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**